# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 664 (780) |
| 2. ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 10.03.2026 |
| 4. ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜಧಾನಿ ಬೆಂಗಳೂರಿನ ಉದ್ದೇಶಿತ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಯೋಜನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು) | ಬೆಂಗಳೂರಿನ 2ನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 3 ಸ್ಥಳಗಳನ್ನು ಗುರುತಿಸಲಾಗಿರುತ್ತದೆ. ಸದರಿ ಸ್ಥಳಗಳಿಗೆ ಭಾರತ ಸರ್ಕಾರದ ನಾಗರೀಕ ವಿಮಾನಯಾನ ಸಚಿವಾಲಯದ (MoCA) Steering Committee ಯಿಂದ Site Clearances ಪಡೆಯಲು ಅರ್ಜಿಗಳನ್ನು ಸಿದ್ದಪಡಿಸಿ ದಿನಾಂಕ: 05.03.2025 ರಂದು ಸಲ್ಲಿಸಲಾಗಿರುತ್ತದೆ. ಗುರುತಿಸಲಾದ 3 ಸ್ಥಳಗಳನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಸಂಸ್ಥೆಯ ತಾಂತ್ರಿಕ ತಂಡವು ದಿನಾಂಕ: 07.04.2025 ರಿಂದ 09.04.2025 ರವರೆಗೆ ಪರಿವೀಕ್ಷಣೆ ಕೈಗೊಂಡು ಅದರ ಪೂರ್ವ ಕಾರ್ಯಸಾಧ್ಯತಾ ವರದಿಯು ದಿನಾಂಕ: 28.10.2025 ರಂದು ಸ್ವೀಕೃತವಾಗಿರುತ್ತದೆ. ಪ್ರಸ್ತುತ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸುವ ಸಮಾಲೋಚಕರನ್ನು ಆಯ್ಕೆ ಮಾಡುವ ಟೆಂಡರ್ ಅನ್ನು 12.12.2025 ರಂದು ಆಹ್ವಾನಿಸಲಾಗಿದ್ದು, ತಾಂತ್ರಿಕ ಬಿಡ್ ಅನ್ನು ದಿನಾಂಕ: 25.02.2026ರಂದು ತೆರೆದಿದ್ದು, ಮೂರು ಬಿಡ್‌ಗಳು ಸ್ವೀಕೃತವಾಗಿವೆ. |
| (ಆ) | ಉದ್ದೇಶಿತ ಯೋಜನೆಯ ಸ್ಥಳಗಳಿಗೆ ಸಂಬಂಧಿಸಿದಂತೆ ಫಿಜಿಬಿಲಿಟಿ ಅಧ್ಯಯನ ನಡೆಸಲು ಸಮಾಲೋಚಕರ ಕಂಪನಿಗಳನ್ನು ಆಯ್ಕೆ ಮಾಡಲಾಗಿದೆಯೇ: ಹಾಗಿದ್ದಲ್ಲಿ, ಆ ಕಂಪನಿಗಳು ಯಾವುವು: (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಯೋಜನೆಯ ಸ್ಥಳಗಳಿಗೆ ಸಂಬಂಧಿಸಿದಂತೆ ಕಾರ್ಯಸಾಧ್ಯತಾ ಅಧ್ಯಯನ ನಡೆಸಲು ಸಮಾಲೋಚಕರ ಕಂಪನಿಗಳನ್ನು ಆಯ್ಕೆ ಮಾಡುವ ಟೆಂಡರಿನ ತಾಂತ್ರಿಕ ಬಿಡ್ ಅನ್ನು ದಿನಾಂಕ:25.02.2026 ರಂದು ತೆರೆಯಲಾಗಿದ್ದು, ಸದರಿ ಟೆಂಡರ್ ನಲ್ಲಿ3 ಬಿಡ್ ಗಳು ಸ್ವೀಕೃತವಾಗಿದ್ದು, ಅವುಗಳ ವಿವರಗಳು ಈ ಕೆಳಗಿನಂತಿದೆ.<br>1. Meinhardt EPCM India Pvt. Ltd.<br>2. Boston Consulting Group India Pvt. Ltd.<br>3. Nippon Koei India Pvt. Ltd. |
| (ಇ) | ಬೆಂಗಳೂರು ದಕ್ಷಿಣ ಭಾಗದಲ್ಲಿರುವ ಅತ್ಯಧಿಕ ಪ್ರಯಾಣಿಕರು ಮತ್ತು ಕಾರ್ಗೋ ಪ್ರಮಾಣವನ್ನು ಗುರಿಯಾಗಿಸಿಕೊಂಡು ಗಡಿಭಾಗದ ಹೊಸೂರಿನಲ್ಲಿ ಅತ್ಯಧಿಕ ಸಾಮರ್ಥ್ಯದ ನೂತನ ವಿಮಾನ ನಿಲ್ದಾಣಕ್ಕೆ ತಮಿಳುನಾಡು ಶರವೇಗದಲ್ಲಿ ಕಾರ್ಯ ಪ್ರವೃತ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬೆಂಗಳೂರು ದಕ್ಷಿಣ ಭಾಗದಲ್ಲಿ ನೂತನ ವಿಮಾನ ನಿಲ್ದಾಣಕ್ಕೆ ತಮಿಳುನಾಡು ಸರ್ಕಾರ ಕಾರ್ಯ ಪ್ರವೃತ್ತವಾಗಿರುವುದು ವಾರ್ತಾ ಪತ್ರಿಕೆಗಳಿಂದ ತಿಳಿದು ಬಂದಿದ್ದು, ಅದರ ಸಾಮರ್ಥ್ಯದ ವಿವರಗಳು ಲಭ್ಯವಿರುವುದಿಲ್ಲ. |
| (ಈ) | ಬಂದಿದ್ದಲ್ಲಿ, ಸರ್ಕಾರ ವಿಳಂಭ ಮಾಡುತ್ತಿರಲು ಕಾರಣವೇನು? (ವಿವರ ನೀಡುವುದು) | ಅನ್ವಯಿಸುವುದಿಲ್ಲ. |

ಸಂಖ್ಯೆ:ಮೂಅಇ50 ರಾಅವಿ 2026

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು